

ಪತ್ನಿ ಚಂದ್ರಿಕಾ ಅವರೊಂದಿಗೆ ವಿದ್ವಾನ್ ವಿಠ್ಠಲ ರಾಮಮೂರ್ತಿ

◆ **ನೀವು ಬಾಲ್ಯವನ್ನು ಕಳೆದ ಕರುಂಬಿತ್ತಿಲ್ ಮನೆಯು ಇಂದು ಸಂಗೀತ ಕ್ಷೇತ್ರದಲ್ಲಿ ಪರಿಚಿತ ಹೆಸರಾಗಬೇಕಾದರೆ ಅಲ್ಲಿ ನಡೆದ ಮದುವೆಯೊಂದು ಮಹತ್ವದ ಪಾತ್ರ ವಹಿಸುತ್ತದೆ ಎನ್ನಬಹುದೇ? ನಿಮ್ಮ ಅಮ್ಮನ ಶಿಸ್ತು ಮತ್ತು ಶ್ರಮಜೀವನದ ಕುರಿತು ವಿವರಿಸುವಿರಾ?**

ಈ ವಿಚಾರವನ್ನು ಹೇಳಬೇಕಾದರೆ ನಮ್ಮ ಅಮ್ಮನ ಮದುವೆಯ ಕಥೆಯನ್ನು ಹೇಳಬೇಕು. ನಮ್ಮ ಅಮ್ಮ ಕುಟುಂಬದಲ್ಲಿ ಮಲ್ಲಮ್ಮ ಎಂದೇ ಕರೆಸಿಕೊಳ್ಳುತ್ತಿದ್ದವರು. 1960ರಲ್ಲಿ ಮೇ ತಿಂಗಳಲ್ಲಿ ಕರುಂಬಿತ್ತಿಲ್ ಬಳಿಯ ಕೊಕ್ಕಡ ಎಂಬ ಊರಿನಲ್ಲಿದ್ದ ಶ್ರೀ ವೈದ್ಯನಾಥ ದೇವಸ್ಥಾನದ ಜಾತ್ರೆಗೆ ಕೊಯಂಬತ್ತೂರಿನಲ್ಲಿ ನೆಲೆಸಿದ್ದ ವಯೊಲಿನ್ ವಾದಕ ವಿದ್ವಾನ್ ಸುಬ್ಬರಾವ್ ಮತ್ತು ಯಮುನಾಬಾಯಿ ದಂಪತಿಯ ಪುತ್ರಿಯರಾದ ಕೃಷ್ಣವೇಣಿ ಮತ್ತು ವಿಜಯಲಕ್ಷ್ಮಿ ಸೋದರಿಯರಿಂದ ಸಂಗೀತ ಕಛೇರಿ ಆಯೋಜಿಸಲಾಗಿತ್ತು. ಸುಬ್ಬರಾವ್ ಅವರ ಕುಟುಂಬಸ್ಥರು ದಕ್ಷಿಣ ಕನ್ನಡದ ಸುರತ್ಕಲ್‌ನ ಬಾಳ ಗ್ರಾಮದವರು. ಸಂಗೀತ ಕಲಿಕೆಗಾಗಿ ಕೊಯಂಬತ್ತೂರಿಗೆ ಹೋಗಿ ನೆಲೆಸಿದ್ದರು. ಹಾಗಾಗಿ ದಕ್ಷಿಣ ಕನ್ನಡಕ್ಕೆ ಪ್ರೀತಿಯಿಂದಲೇ ಬಂದಿದ್ದರು. ಗಾಯನ ಕಛೇರಿಯಲ್ಲಿ ಅಪ್ಪ ಸುಬ್ಬರಾಯರೇ ವಯೊಲಿನ್‌ನಲ್ಲಿ, ವಿದ್ವಾನ್ ಕಾಂಚನ ಮೂರ್ತಿ ಅವರು ಮೃದಂಗದಲ್ಲಿ, ನನ್ನ ಚಿಕ್ಕಪ್ಪನವರಾದ ಕರುಂಬಿತ್ತಿಲ್ ಅಚ್ಯುತ ಹೆಬ್ಬಾರ್ ಅವರು ಖಂಜಿರ ವಾದನದಲ್ಲಿ ಸಹಕರಿಸಿದರು. ದೂರದಿಂದ ಬಂದ ಈ ಕುಟುಂಬವು ಕರುಂಬಿತ್ತಿಲ್ ಮನೆಗೆ ಬಂದು ವಿಶ್ರಾಂತಿ, ಆತಿಥ್ಯ ಪಡೆದು ಹೋಯಿತು. ಗಾಯಕಿ ಕೃಷ್ಣವೇಣಿಯ ನಡೆನುಡಿಯನ್ನು ಗಮನಿಸಿದ ನನ್ನ ಅಜ್ಜಿ ರತ್ನಾವತಿಯವರು, ಈಕೆಯನ್ನು ಸೊಸೆ ಮಾಡಿಕೊಳ್ಳಬೇಕು ಎಂದುಕೊಂಡರು. ಆ ನಿಟ್ಟಿನಲ್ಲಿ ಮಾತುಕತೆಗಳು ನಡೆದು 1961ರ ಏಪ್ರಿಲ್ ಏಪ್ರಿಲ್ 30ರಂದು ನನ್ನ ತಂದೆ ಸುಬ್ರಾಯ ಹೆಬ್ಬಾರರ ಪತ್ನಿಯಾಗಿ ಕರುಂಬಿತ್ತಿಲ್ ಮನೆಗೆ ಸೊಸೆಯಾಗಿ ಬಂದರು. ಅಪ್ಪನಿಗೆ ಯಕ್ಷಗಾನ ಭಾಗವತಿಕೆ ಮತ್ತು ತಾಳಮದ್ದಳೆ ಅರ್ಥಗಾರಿಕೆಯಲ್ಲಿ ಪ್ರೌಢಿಮೆಯಿತ್ತು. ಕಲೆಯ ಬಗೆಗೆ ಪ್ರೀತಿಯಿದ್ದ ಕುಟುಂಬದಲ್ಲಿ ಸಂಸಾರದ ನೊಗ ಹೊತ್ತ ನನ್ನ ಅಮ್ಮ ಸಂಗೀತ ಕಲಿಕೆ ಮುಂದುವರೆಸುವುದು ಸಾಧ್ಯವಾಗಲಿಲ್ಲ. ಆದರೆ ತನ್ನ ಮಕ್ಕಳು, ತನ್ನ ಸುತ್ತಮುತ್ತಲಿನ ಮನೆಯ ಮಕ್ಕಳು ಸಂಗೀತವನ್ನು ಕಲಿಯಬೇಕು ಎಂದು ಆಸೆಪಟ್ಟು ಸಂಗೀತ ಕ್ಲಾಸ್ ಮಾಡಲಾರಂಭಿಸಿದರು.

◆ **ಅವರ ಇದೇ ಆಶಯವು ಮುಂದುವರೆದು ಕರುಂಬಿತ್ತಿಲ್ ಸಂಗೀತ ಶಿಬಿರ ರೂಪುಗೊಳ್ಳಲು ಕಾರಣವಾಯಿತೇ? ಶಿಬಿರವನ್ನು ಆಯೋಜಿಸಿದ ಅನುಭವಗಳ ಕುರಿತು ವಿವರಿಸುವಿರಾ?**

ಕರುಂಬಿತ್ತಿಲ್ ಸಂಗೀತ ಶಿಬಿರವು ಇಂದು ಸಂಗೀತ ಕ್ಷೇತ್ರದಲ್ಲಿ ಗುರುತಿಸಿಕೊಂಡಿದೆ. ಸಂಗೀತ-ಯಕ್ಷಗಾನದ ಗುಂಗಿನೊಂದಿಗೆ ಕಲೆಯ ಬಗ್ಗೆ ಅಭಿಮಾನವಿದ್ದ ನಮ್ಮ ಕುಟುಂಬಕ್ಕೆ ಅಮ್ಮನ ಪ್ರವೇಶವು ಹೊಸ ಆಯಾಮ ನೀಡಿತು. ಸಂಗೀತವನ್ನು ಸಂಭ್ರಮಿಸುವ ಪರಿಪಾಠ ಆರಂಭವಾಯಿತು. ಅಮ್ಮನ ಸೀಮಂತ ಕಾರ್ಯಕ್ರಮಕ್ಕೆ ಕಾಂಚನದ ವಿದ್ವಾನ್ ಸುಬ್ಬರತ್ನಂ ಅವರ ವಯೊಲಿನ್ ವಾದನ ಆಯೋಜಿಸಲಾಗಿತ್ತು. ಹೀಗೆ ನಮ್ಮ ಮನೆಯಲ್ಲಿ ಆಡುಮಾತಿನಲ್ಲಿಯೂ, ತಮಾಷೆಗೂ ಸಂಗೀತ ನುಡಿಗಳೇ ವ್ಯಕ್ತವಾಗುತ್ತಿದ್ದವು. ಸ್ವಲ್ಪ ಸುಂದರವಾಗಿ ದಿರಿಸು ಮಾಡಿಕೊಂಡರೆ, 'ವಾ ಚೆನ್ನಾಗಿ ಕಾಣ್ತೆದ್ದಿ... ಇವತ್ತು ಕಛೇರಿ,